ಮಾಹಿತಿ ಹಕ್ಕು ಅಧಿನಿಯಮ 2005 ಕಲಂ 4(1)(ಎ)

## ವಿಭಾಗ / ಶಾಖೆ ಹೆಸರು: ಅಖಿಲ ಭಾರತ ಸುಸಂಘಟಿತ ಸಂಶೋಧನಾ ಪ್ರಾಯೋಜನೆ – ಸಮಗ್ರ ಕೃಷಿ ಪದ್ಧತಿಗಳು (ಅಭಾಸುಸಪ್ರಾ – ಸಕೃಪ)

| ಕ್ರಮ ಸಂಖ್ಯೆ | ಅಧಿಕಾರಿ / ನೌಕರರ ಹೆಸರು | ಹುದ್ದೆ | ನಿರ್ವಹಿಸುವ ವಿಷಯಗಳು |
|---|---|---|---|
| 1. | ಡಾ. ಎಂ. ಟಿ. ಸಂಜಯ್, | ಬೇಸಾಯ ಶಾಸ್ತ್ರಜ್ಞರು ಹಾಗೂ ಯೋಜನೆ ಮುಖ್ಯಸ್ಥರು | ಬೇಸಾಯ ಶಾಸ್ತ್ರ ಸಂಬಂಧಿತ ವಿಷಯಗಳು. ಪ್ರಸ್ತುತ ಅಭಾಸುಸಪ್ರಾ – ಸಕೃಪ ಪ್ರಾಯೋಜನೆಯ ತಾಂತ್ರಿಕ ಕಾರ್ಯಕ್ರಮಗಳಾದ ಒಎಫ್‌ಆರ್–1: ಪ್ರಧಾನ ಬೆಳೆ ಪದ್ಧತಿಗಳಲ್ಲಿ ಸಸ್ಯ ಪೋಷಕಾಂಶಗಳಿಗೆ ಕೃಷಿ–ಬೆಳೆ ಪ್ರತಿಕ್ರಿಯೆ ಬಗ್ಗೆ ಸಂಶೋಧನೆಯನ್ನು 24 ರೈತರ ತಾಕುಗಳಲ್ಲಿ (ಗೌರಿಬಿದನೂರು ಮತ್ತು ಶಿಡ್ಲಘಟ್ಟ ತಾಲ್ಲೂಕಿನಲ್ಲಿ) ಕೈಗೊಂಡು ಸೂಕ್ತ ತಂತ್ರಜ್ಞಾನವನ್ನು ವರ್ಗಾಯಿಸುವುದು. ಅಧಿಕ ಇಳುವರಿ ಕೊಡುವಂತಹ ಸುಧಾರಿತ ತಳಿಗಳು / ಸಂಕರಣ ತಳಿಗಳ ಬಳಕೆಯನ್ನು ಪ್ರೇರೇಪಿಸಿ ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರಗಳ ಬಳಕೆ ಬಗ್ಗೆ ಉತ್ತೇಜನ ನೀಡುವುದು. ಮಣ್ಣು ಪರೀಕ್ಷೆ ಮಾಡಿಸಿ, ವಿಶ್ಲೇಷಣೆಯ ನಂತರ ಸಮತೋಲನ ಗೊಬ್ಬರಗಳ ಶಿಫಾರಸ್ಸು ಮಾಡುವುದು. ರೈತರು ತಾವು ಬೆಳೆಯುವ ಬೆಳೆ ಪದ್ಧತಿಗಳಲ್ಲಿ ಸಮತೋಲನ ಗೊಬ್ಬರಗಳ ಬಳಕೆ ಮಾಡುವಂತೆ ಪ್ರೇರೇಪಿಸಿ ಮಣ್ಣಿನ ಆರೋಗ್ಯ ಕಾಪಾಡಿಕೊಂಡು ಹೋಗುವಂತೆ ನೋಡಿಕೊಳ್ಳುವುದು. ಎಲ್ಲ 24 ರೈತರ ತಾಕುಗಳಲ್ಲಿ ಪ್ರಯೋಗಗಳ ಫಲಿತಾಂಶದ ಆಧಾರದ ಮೇಲೆ ರಸಗೊಬ್ಬರ ಮತ್ತು ಸಾವಯವ ಗೊಬ್ಬರಗಳ ಶಿಫಾರಸ್ಸು ಮಾಡಿ ರೈತರು ಅಧಿಕ ಇಳುವರಿ ಮತ್ತು ಆದಾಯ ಗಳಿಸುವಂತೆ ನೋಡಿಕೊಳ್ಳುವುದು. ಒಎಫ್‌ಆರ್–2: ಗೌರಿಬಿದನೂರು ಮತ್ತು ಶಿಡ್ಲಘಟ್ಟ ತಾಲ್ಲೂಕಿನ 24 ರೈತರ ತಾಕುಗಳಲ್ಲಿ ಅತಿ ಸಣ್ಣ ಹಿಡುವಳಿ ವ್ಯವಸ್ಥೆಗೆ ಸೂಕ್ತ ಸಮಗ್ರ ಕೃಷಿ ಪದ್ಧತಿಗಳ ಶಿಫಾರಸ್ಸು ಮಾಡುವುದು. ಒಎಫ್‌ಆರ್–3ರಲ್ಲಿ 12 ಜನ ರೈತರ ತಾಕುಗಳಲ್ಲಿ (ಗೌರಿಬಿದನೂರು ಮತ್ತು ಶಿಡ್ಲಘಟ್ಟ ತಾಲ್ಲೂಕಿನಲ್ಲಿ) ಸಣ್ಣ ಮತ್ತು ಅತಿ ಸಣ್ಣ ರೈತರು ಹೆಚ್ಚಿನ ಲಾಭಾಂಶ ಮತ್ತು ಜೀವನ ಮಟ್ಟ ಸುಧಾರಣೆಗೆ ಸೂಕ್ತ ಬೇಸಾಯ ಪದ್ಧತಿ ಮಾದರಿಗಳ ಮೌಲ್ಯಮಾಪನ ಮಾಡಿ ಸೂಕ್ತ ಶಿಫಾರಸ್ಸು ಕೊಡುವುದು. ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಗಿರಿಜನರಿಗೆ ಗಿರಿಜನ ಉಪಯೋಜನೆಯ ಸವಲತ್ತುಗಳನ್ನು ಮತ್ತು ತಾಂತ್ರಿಕ ಮಾಹಿತಿಯನ್ನು ಕಾಲಕಾಲಕ್ಕೆ ಕೊಡುವುದು. ಕೃಷಿ ಇಲಾಖೆ ಮತ್ತು ಕೃಷಿಗೆ ಸಂಬಂಧಿಸಿದ ಸಂಸ್ಥೆಗಳ ಕೋರಿಕೆ ಮೇಲೆ ಉಪನ್ಯಾಸಗಳನ್ನು ಕೊಟ್ಟು ರೈತರಿಗೆ ಮಾಹಿತಿಯನ್ನು ವರ್ಗಾಯಿಸುವುದು. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯ ಕಾರ್ಯ ವ್ಯಾಪ್ತಿ ಸಂಶೋಧನಾ ತಂಡದ ಮುಖ್ಯಸ್ಥನಾಗಿ ಕಾರ್ಯ ನಿರ್ವಹಿಸುವುದು. ಈ ಯೋಜನೆ ಅಡಿಯಲ್ಲಿ ಕೃಷಿ ವಲಯ 5 ಮತ್ತು ಕೃಷಿ ವಲಯ 6 ರಲ್ಲಿ ಕೃಷಿ ಸಂಶೋಧನಾ ತಾಕುಗಳಲ್ಲಿ ಪ್ರಯೋಗಗಳನ್ನು ಕೈಗೊಂಡು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯ ವೈಜ್ಞಾನಿಕ ವಿಶ್ಲೇಷಣೆ ಕೈಗೊಳ್ಳುವುದು. ಕೃಷಿ ವಲಯ 5 ರಲ್ಲಿ ಮತ್ತು ಕೃಷಿ ವಲಯ 6 ರಲ್ಲಿ ತಲಾ 2000 ಹೆಕ್ಟೇರ್ ಪ್ರದೇಶದಲ್ಲಿ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು, ರೈತರ ಪದ್ಧತಿಯೊಂದಿಗೆ ಹೋಲಿಕೆ ಮಾಡಿ ವೈಜ್ಞಾನಿಕ ವಿಶ್ಲೇಷಣೆ ಕೈಗೊಳ್ಳುವುದು. ಎಲ್ಲ ಫಲಾನುಭವಿ ರೈತರಿಗೆ ಕೃಷಿ ವಲಯ5 ರಲ್ಲಿ 24 ತಾಲ್ಲೂಕುಗಳಲ್ಲಿ ಹಾಗೂ ಕೃಷಿ ವಲಯ 6 ರಲ್ಲಿ 18 ತಾಲ್ಲೂಕುಗಳಲ್ಲಿ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯ ಬಗ್ಗೆ ತರಬೇತಿ ಕಾರ್ಯಕ್ರಮ ಆಯೋಜಿಸಿ ಅರಿವು ಮೂಡಿಸುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುದಾನಿತ ಸಮಗ್ರ ಕೃಷಿ ಪದ್ಧತಿಗಳು ಪ್ರಾತ್ಯಕ್ಷಿಕೆಗಳು ಯೋಜನೆ ಯಡಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 10 ಜಿಲ್ಲೆಗಳಲ್ಲಿ ಕೈಗೊಂಡಿರುವ ಸಮಗ್ರ ಕೃಷಿ ಪದ್ಧತಿಗಳ ಪ್ರಾತ್ಯಕ್ಷಿಕೆಗಳ ವರದಿಯನ್ನು ತಯಾರು ಮಾಡಿ, ಪ್ರಗತಿ ವರದಿಗಳನ್ನು ಸಲ್ಲಿಸುವುದು. ಸಮಗ್ರ ಕೃಷಿ ಪದ್ಧತಿಗಳಲ್ಲಿ ಯಶಸನ್ನು ಕಂಡಂತಹ ರೈತರ ಯಶೋಗಾಥೆಯನ್ನು ಪ್ರಕಟಿಸಿ ಎಲ್ಲ ರೈತರಿಗೆ ಹಂಚುವುದು. ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ವಹಿಸುವ ಇನ್ನಿತರೆ ಯಾವುದೇ ಕೆಲಸವನ್ನು ಮತ್ತು ಜವಬ್ದಾರಿಗಳನ್ನು ಶ್ರದ್ದೆಯಿಂದ ನಿಭಾಯಿಸುವುದು. |
| 2. | ಡಾ. ಮಾಹೀನ್ ಶರೀಫ್ | ಕಿರಿಯ ಅರ್ಥಶಾಸ್ತ್ರಜ್ಞರು | ಕೃಷಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳು. ಪ್ರಸ್ತುತ ಅಭಾಸುಸಪ್ರಾ – ಸಕೃಪ ಪ್ರಾಯೋಜನೆಯ ತಾಂತ್ರಿಕ ಕಾರ್ಯಕ್ರಮಗಳಾದ ಒಎಫ್‌ಆರ್–1: ಪ್ರಧಾನ ಬೆಳೆ ಪದ್ಧತಿಗಳಲ್ಲಿ ಸಸ್ಯ ಪೋಷಕಾಂಶಗಳಿಗೆ ಕೃಷಿ–ಬೆಳೆ ಪ್ರತಿಕ್ರಿಯೆ ಬಗ್ಗೆ ಸಂಶೋಧನೆಯನ್ನು 24 ರೈತರ ತಾಕುಗಳಲ್ಲಿ (ಗೌರಿಬಿದನೂರು ಮತ್ತು ಶಿಡ್ಲಘಟ್ಟ ತಾಲ್ಲೂಕಿನಲ್ಲಿ) ಕೈಗೊಂಡು ಅತಿ ಹೆಚ್ಚು ಲಾಭ:ಖರ್ಚು ಅನುಪಾತವನ್ನು ಕೊಡುವ ಉಪಚಾರಗಳನ್ನು ವಿಶ್ಲೇಷಿಸಿ ರೈತರಿಗೆ ಅಳವಡಿಸಿಕೊಳ್ಳಲು ಸೂಕ್ತ ಮಾಹಿತಿ ಮತ್ತು ಶಿಫಾರಸ್ಸುಗಳನ್ನು ಕೊಡುವುದು. ಕೃಷಿಯನ್ನು ಲಾಭದಾಯಕ ಗೊಳಿಸುವ ಬಗ್ಗೆ ರೈತರಿಗೆ ಮಾಹಿತಿಯನ್ನು ಕೊಡುವುದು. ರೈತರು ಅಧಿಕ ಇಳುವರಿ ಮತ್ತು ಆದಾಯ ಗಳಿಸುವಂತೆ ನೋಡಿಕೋಳ್ಳುವುದು. ಒಎಫ್‌ಆರ್–2: |